ಇಲಾಖೆಯಿಂದ ಸಮೀಕ್ಷೆ ಮಾಡಿಸಿದ್ದು, ತಾಲ್ಲೂಕುವಾರು ಮತ್ತು ವಿಧಾನಸಭಾ ಕ್ಷೇತ್ರವಾರು ಹಾನಿಯಾದ ವಿಸ್ತೀರ್ಣದ ವಿವರಗಳನ್ನು ಲಗತ್ತಿಸಿದೆ.

ಆ) ಕೊಚ್ಚಿ ಹೋಗಿರುವ ರೈತರ ಜಮೀನುಗಳಿಗೆ ಸಿಆರ್‌ಎಫ್ ಮಾರ್ಗಸೂಚಿಯಂತೆ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಮಾತ್ರ ಹೆಕ್ಟೇರು ಒಂದಕ್ಕೆ ರೂ. 6000–00 ದರದಲ್ಲಿ ಪರಿಹಾರ ಧನವನ್ನು ಜಲಾನಯನ ಅಧಿಕಾರಿಗಳಿಂದ ಪಾವತಿಸಲಾಗಿದೆ. ಒಟ್ಟು ರೂ. 277–00 ಲಕ್ಷಗಳ ಪರಿಹಾರ ಧನ ವಿತರಿಸಲಾಗಿದೆ.

ಇ) ಪರಿಹಾರ ನೀಡಿದ ಗ್ರಾಮಗಳು, ರೈತರ ಸಂಖ್ಯೆ ಮತ್ತು ಪಾವತಿಸಿದ ಮೊತ್ತದ ವಿವರಗಳನ್ನು ತಾಲ್ಲೂಕುವಾರು ಮತ್ತು ವಿಧಾನಸಭಾ ಕ್ಷೇತ್ರವಾರು ಲಗತ್ತಿಸಿದೆ.

ಈ) ಹಳ್ಳ ಮತ್ತು ಕೆರೆಗಳ ಪ್ರವಾಹದ ನೀರಿನಿಂದಾಗಿ ಸಹ ಕೃಷಿ ಜಮೀನುಗಳು ಕೊಚ್ಚಿ ಹೋಗಿರುತ್ತವೆ. ಈ ಅಂಶವೂ ಸಹ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಉ) ಸಿಆರ್‌ಎಫ್ ಮಾರ್ಗಸೂಚಿಯ ಪ್ರಕಾರ ನದಿ ಪ್ರವಾಹದಿಂದ ಕೊಚ್ಚಿಹೋಗಿರುವ ಪ್ರದೇಶದ ಜಮೀನುಗಳಿಗೆ ಮಾತ್ರ ಪರಿಹಾರ ನೀಡಲು ಅವಕಾಶ ಕಲ್ಪಿಸಲಾಗಿದೆ.

ರೇಷ್ಮೆ ಇಲಾಖೆಯ ಹುದ್ದೆಗಳು

676 (264) ಶ್ರೀ ರಾಮಲಿಂಗಾರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಸಣ್ಣ ಕೈಗಾರಿಕೆ ಹಾಗೂ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳುಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಇಲಾಖೆಯಲ್ಲಿ ಹಾಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳು/ ಅಧಿಕಾರೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು;

ಆ) ಈ ಇಲಾಖೆಯನ್ನು ಪುನರ್ ರಚನೆ ಮಾಡಲು ಸರ್ಕಾರ ನಿರ್ಧರಿಸಿದೆಯೇ;

ಇ) ಹಾಗಿದ್ದಲ್ಲಿ, ಎಷ್ಟು ಹುದ್ದೆಗಳನ್ನು ರದ್ದುಗೊಳಿಸಲು ತೀರ್ಮಾನಿಸಲಾಗಿದೆ;

ಈ) ಈ ಇಲಾಖೆಯಲ್ಲಿ ಯಾವ ಯಾವ ಕಛೇರಿಗಳನ್ನು ಮುಚ್ಚಲು ತೀರ್ಮಾನಿಸಲಾಗಿದೆ;

ಉ) ಇದರಿಂದ ರೇಷ್ಮೆ ಉತ್ಪಾದನೆ ಹೆಚ್ಚಿಸಲು ಸಿಬ್ಬಂದಿ ಕೊರತೆಯಾಗುವುದಿಲ್ಲವೇ;

ಊ) ಸದರಿ ಹುದ್ದೆಗಳನ್ನು ರದ್ದು ಮಾಡುವ ಬದಲು ಅಧಿಕಾರಿಗಳನ್ನು ರೇಷ್ಮೆ ಉತ್ಪಾದನೆಗೆ ಅಗತ್ಯವಾಗಿರುವ ಕಡೆಗಳಿಗೆ ನಿಯೋಜಿಸಲಾಗುವುದೇ?

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆ ಹಾಗೂ ರೇಷ್ಮೆ ಸಚಿವರು) :

ಅ) ರೇಷ್ಮೆ ಇಲಾಖೆಯಲ್ಲಿ ಹಾಲಿ 448 ಅಧಿಕಾರಿಗಳು ಮತ್ತು 3440 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

ಆ) ಹೌದು. ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಯಾವುದೇ ಹುದ್ದೆಯನ್ನು ರದ್ದುಗೊಳಿಸಲು ಪ್ರಸ್ತಾಪಿಸಿರುವುದಿಲ್ಲ.

ಈ) ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಹಿಪ್ಪುನೇರಳೆ ವಿಸ್ತೀರ್ಣ ಆಧರಿಸಿ ಅಧಿಕಾರಿ / ಸಿಬ್ಬಂದಿ ಹೊಂದಾಣಿಕೆ ಮಾಡಲಾಗಿದೆ.

ಊ) ಯಾವುದೇ ಹುದ್ದೆಯನ್ನು ರದ್ದುಪಡಿಸುತ್ತಿಲ್ಲದ ಕಾರಣ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ತೋರಣಗಲ್‌ನಲ್ಲಿ ಮಿತ್ತಲ್ ಉಕ್ಕು ಕಾರ್ಖಾನೆ

677 (265) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ತೋರಣಗಲ್‌ನಲ್ಲಿ ಅರ್ಸೆಲರ್ ಮಿತ್ತಲ್ ಉಕ್ಕು ಕಾರ್ಖಾನೆ ಸ್ಥಾಪಿಸಲು ಸರ್ಕಾರ ಅನುಮತಿ ನೀಡಿದೆಯೇ?

ಆ) ನೀಡಿದ್ದಲ್ಲಿ, ಇದಕ್ಕಾಗಿ ಎಷ್ಟು ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗುವುದು (ವಿವರ ನೀಡುವುದು);

ಇ) ಸರ್ಕಾರಿ ಜಮೀನನ್ನು ಮಾತ್ರ ಸ್ವಾಧೀನಪಡಿಸಿಕೊಳ್ಳಲಾಗುವುದೇ;

ಈ) ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ರೈತರು ಒಪ್ಪಿಗೆ ಸೂಚಿಸಿದ್ದಾರೆಯೇ;

ಉ) ಈ ಕಾರ್ಖಾನೆಗೆ ನೀರು, ವಿದ್ಯುತ್ ಸೌಲಭ್ಯ ಒದಗಿಸಲು ಕೈಗೊಂಡ ಕ್ರಮಗಳೇನು;